ಕರ್ನಾಟಕ ಸರ್ಕಾರ
ಪಂಚಾಯತ್ ರಾಜ್ ಆಯುಕ್ತಾಲಯ
ಕಾಳಿದಾಸ ಮಾರ್ಗ, ಕೆ.ಜಿ.ರಸ್ತೆ, ಬೆಂಗಳೂರು - 560 009.

ಸಂಖ್ಯೆ:ಕಪಂರಾಆ/ಅಭಿವೃದ್ಧಿ/ಗ್ರಂಥಾಲಯ/212/2023 ದಿನಾಂಕ:19.05.2023

C.No: 1078051

## ಸುತ್ತೋಲೆ

**ವಿಷಯ:-** ಗ್ರಾಮ ಪಂಚಾಯತಿ ಗ್ರಂಥಾಲಯಗಳಲ್ಲಿ "ಓದುವ ಬೆಳಕು" ಅಂಗವಾಗಿ **"ನನ್ನ ಪ್ರೀತಿಯ ಗ್ರಂಥಾಲಯ"** ಅಭಿಯಾನ ಆಯೋಜಿಸುವ ಕುರಿತು.

***

ಗ್ರಾಮೀಣಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಮಕ್ಕಳು ಓದುವುದುರಲ್ಲಿ ಮತ್ತು ಕಲಿಕೆಯಲ್ಲಿ ತೊಡಗಿಸಿಕೊಳ್ಳಲು "ಓದುವ ಬೆಳಕು" ಕಾರ್ಯಕ್ರಮವನ್ನು ಆರಂಭಿಸಲಾಗಿದೆ. ಸದರಿ ಕಾರ್ಯಕ್ರಮದ ಮೂಲಕ ಶಾಲಾ ಮಕ್ಕಳನ್ನು, ವಿಶೇಷವಾಗಿ ಗ್ರಾಮೀಣ ಮಕ್ಕಳನ್ನು ವ್ಯವಸ್ಥಿತವಾಗಿ ಕಲಿಕಾ ಕ್ಷೇತ್ರಕ್ಕೆ ಮರಳಿ ತರುವ ಗುರಿಯನ್ನು ಹೊಂದಲಾಗಿದೆ. ಗ್ರಂಥಾಲಯಗಳನ್ನು ಗ್ರಾಮೀಣ ಜ್ಞಾನ ಕೇಂದ್ರಗಳನ್ನಾಗಿಸಲು ಗ್ರಂಥಾಲಯಗಳ ನವೀಕರಣ, ಡಿಜಿಟಲೀಕರಣ ಸೇರಿದಂತೆ ವಿವಿಧ ಕ್ರಮಗಳನ್ನು ಈಗಾಗಲೇ ಕೈಗೊಳ್ಳಲಾಗಿದೆ.

ಮುಂದುವರೆದು, "ಓದುವ ಬೆಳಕು" ಕಾರ್ಯಕ್ರಮದಡಿಯಲ್ಲಿ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ಹಲವಾರು ಅಭಿಯಾನಗಳ ಮೂಲಕ ಪ್ರತಿ ತಿಂಗಳು ಉಪಯುಕ್ತ ಚಟುವಟಿಕೆಯನ್ನು ಸಮರ್ಪಕವಾಗಿ ಆಯೋಜಿಸಲಾಗಿದ್ದು,ಗ್ರಂಥಾಲಯಗಳನ್ನು ಸದುಪಯೋಗ ಪಡಿಸಿಕೊಳ್ಳಲು ಅವಕಾಶ ಕಲ್ಪಿಸುವ ಅವಶ್ಯಕತೆ ಇದೆ. ಗ್ರಾಮೀಣ ಪ್ರದೇಶದ ಎಲ್ಲಾ ಮಕ್ಕಳು, ಹದಿಹರೆಯದವರು, ಯುವ ವಯಸ್ಕರು, ವಯಸ್ಕರು ಹಾಗೂ ಹಿರಿಯ ನಾಗರೀಕರು ಗ್ರಂಥಾಲಯವನ್ನು ಬಳಸಲು ಅವಕಾಶ ಕಲ್ಪಿಸುವ ಉದ್ದೇಶದಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು **ಜೂನ್ ಮಾಹೆಯಲ್ಲಿ "ನನ್ನ ಪ್ರೀತಿಯ ಗ್ರಂಥಾಲಯ" ಅಭಿಯಾನವನ್ನು** ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳಲ್ಲಿ ಆಯೋಜಿಸಲು ನಿರ್ಧರಿಸಿದೆ.

**ಅಭಿಯಾನದಲ್ಲಿ ಕೈಗೊಳ್ಳಬೇಕಾದ ಚಟುವಟಿಕೆಗಳು:**

- ಪುಸ್ತಕಗಳನ್ನು ಮತ್ತು ಗ್ರಂಥಾಲಯಗಳನ್ನು ಪ್ರೀತಿಸುವ ಮಕ್ಕಳ ಬಗ್ಗೆ ಪುಸ್ತಕಗಳನ್ನು ಓದುವುದು. ಉದಾ. ದೀಪಾಂಜನ ಪಾಲ್ ಅವರ ಪುಚ್ಚುವಿಗೊಂದು ಬುಕ್ಕು. ಹೆಚ್ಚಿನ ಕಥೆಗಳ ಸಂಪನ್ಮೂಲಗಳು : **ವಿಜಯಕರ್ನಾಟಕ ಮಕ್ಕಳ ಕಥೆಗಳು ,**
  **Storyweaver ಮಕ್ಕಳ ಕಥೆಗಳು**

- ಲೈಬ್ರರಿ ಸ್ಕ್ಯಾವೆಂಜರ್ ಹಂಟ್ (ನೋಡಿ **template**)

- ಮಕ್ಕಳು ತಮ್ಮ ಗ್ರಂಥಾಲಯವನ್ನು ಸೃಜನಾತ್ಮಕವಾಗಿ ಅಲಂಕರಿಸುವುದು ಮತ್ತು ಅವುಗಳ ಚಿತ್ರಗಳನ್ನು ತೆಗೆದುಕೊಳ್ಳುವುದು.

- ಗ್ರಂಥಾಲಯ ಮೇಲ್ವಿಚಾರಕರು ಗ್ರಂಥಾಲಯಗಳ ಇತಿಹಾಸದ ಬಗ್ಗೆ ರಸಪ್ರಶ್ನೆಯನ್ನು ಆಯೋಜಿಸುವುದು.
- ಗ್ರಂಥಾಲಯ ಮೇಲ್ವಿಚಾರಕರು ಮಕ್ಕಳಿಗಾಗಿ ಪ್ರಬಂಧ ಸ್ಪರ್ಧೆಯನ್ನು ಆಯೋಜಿಸುವುದು, ಅದರಲ್ಲಿ ಪುಸ್ತಕಗಳು ಮತ್ತು ಗ್ರಂಥಾಲಯಗಳು ಇಲ್ಲದಿದ್ದರೆ ಭವಿಷ್ಯವು (future) ಹೇಗಿರುತ್ತದೆ ಎಂಬುದರ ಕುರಿತು ಬರೆಯುವುದು.

- ವಿದ್ಯಾರ್ಥಿಗಳು ಗ್ರಂಥಾಲಯದಲ್ಲಿ ಪುಸ್ತಕಗಳನ್ನು ಮರುಜೋಡಿಸಲು ಗ್ರಂಥಾಲಯ ಮೇಲ್ವಿಚಾರಕರು ಸಹಾಯ ಮಾಡುವುದು. ಪುಸ್ತಕದ ಹೆಸರು ಮತ್ತು ಲೇಖಕರನ್ನು ಗಮನಿಸಿ ಒಂದು ಪಟ್ಟಿಯನ್ನು ಮಾಡಿ ಅದರಂತೆ ಜೋಡಿಸುವುದು ಮತ್ತು ಗ್ರಂಥಾಲಯ ಮೇಲ್ವಿಚಾರಕರು ಮಕ್ಕಳೊಂದಿಗೆ ಗ್ರಂಥಾಲಯ ತರಬೇತಿದಾರರಂತೆ ಕೆಲಸ ಮಾಡುವುದು.

- ವಿದ್ಯಾರ್ಥಿಗಳು/ಮಕ್ಕಳು ಗ್ರಂಥಾಲಯದಲ್ಲಿ ಒಟ್ಟಿಗೆ ಕುಳಿತು ಗ್ರಂಥಾಲಯದ ಬಗ್ಗೆ ಒಂದು ಸಣ್ಣ ಕಥೆಯನ್ನು ಬರೆಯುವುದು ಮತ್ತು ವಿವರಿಸುವುದು ಮತ್ತು ಅವರೆಲ್ಲರೂ ತಾವು ಬರೆದಿರುವ ಮಾಹಿತಿಯನ್ನು ಗ್ರಂಥಾಲಯದಲ್ಲಿ ಪ್ರದರ್ಶಿಸುವುದು, ಸದರಿ ಕಥೆಗಳ ಪ್ರದರ್ಶನವನ್ನು ತಮ್ಮ ಹೆಸರಿನೊಂದಿಗೆ ಪ್ರದರ್ಶಿಸುವುದು, (ಗ್ರಂಥಾಲಯ ಮೇಲ್ವಿಚಾರಕರು ಮಕ್ಕಳಿಗೆ ಕಥೆಯನ್ನು ಬರೆಯಲು ಬೇಕಾದ ಮಾಹಿತಿಯನ್ನು ಸಂಗ್ರಹಿಸಲು, ಅರ್ಥಪೂರ್ಣ ವಾಕ್ಯಗಳನ್ನು ರಚಿಸಲು, ಕಥೆಯ ವಿನ್ಯಾಸಗಳ ಕುರಿತು ಸಹಾಯ ಮಾಡುವುದು.

- ಪುಸ್ತಕಗಳು ಅಥವಾ ಗ್ರಂಥಾಲಯಗಳ ಬಗ್ಗೆ ಕವನಗಳು: ಮಕ್ಕಳು ಪುಸ್ತಕಗಳನ್ನು ಮತ್ತು ಗ್ರಂಥಾಲಯವನ್ನು ಏಕೆ ಪ್ರೀತಿಸುತ್ತಾರೆ ಎಂಬುದರ ಕುರಿತು ತಮ್ಮ ಅನಿಸಿಕೆಗಳನ್ನು ಬರೆಯುವುದು ಮತ್ತು ಇದನ್ನು ಪರಸ್ಪರ ಹಂಚಿಕೊಳ್ಳುವುದು ಮತ್ತು ಅವುಗಳನ್ನು ಗ್ರಂಥಾಲಯದಲ್ಲಿ ಪ್ರದರ್ಶಿಸುವುದು.
- ಗ್ರಂಥಾಲಯಗಳಲ್ಲಿ ಮಕ್ಕಳಿಂದ ಉಚಿತವಾಗಿ ನೆರೆಹೊರೆಯವರ, ಸ್ನೇಹಿತರ ನೋಂದಣಿಗಳನ್ನು ಹೆಚ್ಚಿಸುವ ಪ್ರಯತ್ನ ಮಾಡುವುದು.

ಆಯುಕ್ತರು
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಬೆಂಗಳೂರು.

ಇವರಿಗೆ:

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ (ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
3. ರಾಜ್ಯದ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ(ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
4. ಗ್ರಾಮ ಪಂಚಾಯಿತಿಯ ಗ್ರಂಥಾಲಯ ಮೇಲ್ವಿಚಾರಕರುಗಳಿಗೆ(ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮುಖಾಂತರ)
5. ಮಾಹಿತಿ ಕೇಂದ್ರ/ವೆಬ್ಸ್ಶೈಟ್, ಗ್ರಾಅಪ ಇಲಾಖೆ.
6. ಮಾಹಿತಿ ಕೇಂದ್ರ/ವೆಬ್‌ಸೈಟ್, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.

ಪ್ರತಿಯನ್ನು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಇವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು(ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು ಇವರ ಆಪ್ತ ಸಹಾಯಕರಿಗೆ.
4. ಕಛೇರಿ ಪ್ರತಿ.